13.	ಸಿ.ಪಿ. ಕೊಲ್ಲೊಳ್ಳಿ	--	ನಿರ್ದೇಶಕರು
14.	ಕೆ.ಸಿ. ಮರೆಡ್ಡಿ	--	ನಿರ್ದೇಶಕರು
15.	ಎಸ್.ಎಸ್. ಪಾಟೀಲ್	--	ನಿರ್ದೇಶಕರು
16.	ಎ.ಎಂ. ದಲಾಲ	--	ನಿರ್ದೇಶಕರು

5. ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ (ನಿ), ಗದಗ.

01.	ಸಿ.ಎ. ನಾಳದ	ಅಧ್ಯಕ್ಷರು
02.	ಬಿ.ಆರ್. ಯಾವಗಲ್	ಉಪಾಧ್ಯಕ್ಷರು
03.	ಎಂ.ಎಸ್. ತಿಮ್ಮಣ ಗೌಡರ್	ನಿರ್ದೇಶಕರು.
04.	ಎಸ್.ಪಿ. ಪಾಟೀಲ್	ನಿರ್ದೇಶಕರು.
05.	ಎಸ್.ಟಿ. ಕೊಳ್ಳಿಯಾರವರ	ನಿರ್ದೇಶಕರು.
06.	ಡಿ.ಸಿ. ಪಾಟೀಲ್	ನಿರ್ದೇಶಕರು.
07.	ಎಸ್.ಎಫ್. ಯಾಳಿಗಾರ	ನಿರ್ದೇಶಕರು.
08.	ಈ.ಈ. ಇಂಡಿ	ನಿರ್ದೇಶಕರು.
09.	ಸಿ.ಪಿ. ರಾಮರೆಡ್ಡಿ	ನಿರ್ದೇಶಕರು.
10.	ಎಸ್.ಪಿ. ಗುಡ್ಡಳಿ	ನಿರ್ದೇಶಕರು.
11.	ಎ.ಎಸ್. ಅಂಗಡಿ	ನಿರ್ದೇಶಕರು.
12.	ಜಿ.ಡಿ. ನರಗುಂದ	ನಿರ್ದೇಶಕರು.
13.	ಬಿ.ಜಿ. ನಾಕೋಟಗಿ	ನಿರ್ದೇಶಕರು.
14.	ಎಸ್.ಕೆ. ಚಂದಾಪೂರ	ನಿರ್ದೇಶಕರು.
15.	ಆರ್.ಹೆಚ್. ಕ್ವಾಡದ	ನಿರ್ದೇಶಕರು.
16.	ಜಿ.ಡಿ. ನಡುವಿನ್‌ಮನಿ	ನಿರ್ದೇಶಕರು.
17.	ಎಸ್.ಹೆಚ್. ತಿಮ್ಮರೆಡ್ಡಿಯಾರ	ನಿರ್ದೇಶಕರು.
18.	ಎಸ್.ವಿ. ಚಂದ್ರಾಮರ	ನಿರ್ದೇಶಕರು.
19.	ಸಹಕಾರ ಸಂಘಗಳ ಉಪನಿಬಂಧಕರು, ಗದಗ.	ಪದನಿಮಿತ್ತ ನಿರ್ದೇಶಕರು.
20.	ಎಸ್.ಹೆಚ್. ಗಿರಡ್ಡಿ	ನಿರ್ದೇಶಕರು.

6. ಗದಗ ಸಹಕಾರಿ ಎಣ್ಣೆ ಗಿರಣಿ ನಿ, ಗದಗ.

ಸಂಘವು ಸಮಾಪನೆಗೊಂಡಿರುತ್ತದೆ. ಸಹಕಾರ ಸಂಘಗಳ ಉಪ ನಿಬಂಧಕರು, ಗದಗ ಇವರು ಸಮಾಪನೆ ಅಧಿಕಾರಿಯಾಗಿರುತ್ತಾರೆ.

ಕೃಷಿ ತೋಟಗಾರಿಕೆ ರಫ್ತುವಲಯದ ಸಾಧನೆ

634 (5187) : ಶ್ರೀ ಎನ್. ಯೋಗಿಶ್ ಭಟ್ (ಮಂಗಳೂರು) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ, ತೋಟಗಾರಿಕಾ ರಫ್ತು ವಲಯದ ಸಾಧನೆಗಳೇನು: ಎಷ್ಟು ಫಲಾನುಭವಿಗಳಿಗೆ ಎಷ್ಟು ಲಾಭವಾಗಿದೆ?

ಆ) ಪರಿಸರ ನೈರ್ಮಲ್ಯ ಅಭಿವೃದ್ಧಿಯತ್ತ ತೋಟಗಾರಿಕಾ ಇಲಾಖೆಯ ಸಾಧನೆಗಳೇನು?

ಇ) ಮಂಗಳೂರಿನ ಕದ್ರಿಪಾರ್ಕ್ ಅಭಿವೃದ್ಧಿ ಗೊಳಿಸಲು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ರಾಜ್ಯದಲ್ಲಿ ಬೆಂಗಳೂರು ಗುಲಾಬಿ ಈರುಳ್ಳಿ, ಗೆರ್ಕಿನ್ಸ್ ಮತ್ತು ಪುಷ್ಪಾಭಿವೃದ್ಧಿಗಾಗಿ ರಫ್ತು ವಲಯಗಳನ್ನು ಸ್ಥಾಪಿಸಲಾಗಿದೆ. ಇದರಿಂದ ಸಾಧಿಸಲಾದ ಪ್ರಗತಿಯು ಕೆಳಕಂಡಂತಿರುತ್ತದೆ.

1. ವಿವಿಧ ಏಜೆನ್ಸಿಗಳು ಮತ್ತು ಮೂಲಕಗಳಿಂದ ಈ ಬೆಳೆಗಳ ಅಭಿವೃದ್ಧಿಗೆ ಅಗತ್ಯವಾಗಿದ್ದ ಬಂಡವಾಳ, ಮೂಲಸೌಕರ್ಯ ಮತ್ತು ಇತರೆ ಸೌಲಭ್ಯಗಳನ್ನು ಸಾಂದ್ರೀಕರಿಸಲಾಗಿದೆ.

2. ಈ ಬೆಳೆಗಳ ಉತ್ತಮ ಗುಣಮಟ್ಟದ ಫಸಲಿನ ಉತ್ಪಾದನೆಗೆ ಅಗತ್ಯವಿರುವ ಬೇಸಾಯ ಸಾಮಗ್ರಿಗಳ ಸರಬರಾಜಿನಲ್ಲಿ ಸುವ್ಯವಸ್ಥೆ ಕಲ್ಪಿಸಲಾಗಿದೆ.

3. ರಫ್ತು ಗುಣಮಟ್ಟದ ಉತ್ಪಾದನೆಗಾಗಿ ರೈತರಿಗೆ ತಾಂತ್ರಿಕ ಮಾಹಿತಿಯನ್ನು ತರಬೇತಿ, ಎಚಾರ ಸಂಕಿರಣ, ಪ್ರಕಟಣೆಗಳು ಮತ್ತಿತರೆ ಮಾದ್ಯಮಗಳ ಮೂಲಕ ಒದಗಿಸಲಾಗಿದೆ.

4. ಖಾಸಗಿಯವರ ಪಾಲುದಾರಿಕೆಯನ್ನು ಪ್ರೋತ್ಸಾಹಿಸಿ ಉತ್ಪಾದನೆ, ಸಂಸ್ಕರಣೆ ಮತ್ತು ರಫ್ತು ವಹಿವಾಟಿನ ಅಡಚಣೆಗಳನ್ನು ನಿವಾರಿಸಲಾಗಿದೆ.

ಈ ಕ್ರಮಗಳಿಂದಾಗಿ ಸುಮಾರು 35200 ಫಲಾನುಭವಿಗಳಿಗೆ ಲಾಭವಾಗಿದೆ. ಹಾಗೂ ಸುಮಾರು 236 ಕೋಟಿ ರೂ ಮೌಲ್ಯದ ರಫ್ತು ವಹಿವಾಟು ಮಾಡಲಾಗಿದೆ.

ಆ) 1. ತೋಟಗಾರಿಕೆ ಇಲಾಖೆಯು ವಿವಿಧ ಯೋಜನೆಗಳನ್ನು ಅನುಷ್ಠಾನ ಗೊಳಿಸುತ್ತಿದ್ದು ಪಣ್ಣು, ಪ್ಲಾಂಟೇಷನ್ ಬೆಳೆಗಳು, ತರಕಾರಿಗಳು, ಪಿಷ್ಪಗಳು, ಅಲಂಕಾರಿಕ ಗಿಡಗಳು, ಔಷಧೀಯ ಮತ್ತು ಸುಗಂಧಯುಕ್ತ ಸಸ್ಯಗಳು ಇತ್ಯಾದಿಗಳನ್ನು ರೈತರಿಗೆ ನೀಡಲಗುತ್ತದೆ. ಈ ಮೂಲಕ ಹಸಿರಿನ ಪರಿಸರವನ್ನು ಹೆಚ್ಚಿಸುವಲ್ಲಿ ಕಾರಣವಾಗಿದೆ.

2. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 415 ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳಿದ್ದು, ಸುಮಾರು 17150 ಎಕರೆ ಪ್ರದೇಶಗಳಲ್ಲಿ ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ.

3. ತೋಟಗಾರಿಕೆ ಕ್ಷೇತ್ರಗಳಲ್ಲಿ ವಿವಿಧ ತೋಟಗಾರಿಕೆ ಬೆಳೆಗಳ ಸಸ್ಯೋತ್ಪಾದನೆ ಕಾರ್ಯಗಳನ್ನು ತೆಗೆದುಕೊಂಡು ಅಂದಾಜು 25 ಲಕ್ಷ ಉತ್ತಮ ಸಸಿ:ಕಸಿಗಳನ್ನು ಉತ್ಪಾದಿಸಿ ರೈತರಿಗೆ ನೀಡಿ ಪ್ರದೇಶಾಭಿವೃದ್ಧಿ ಮಾಡಿ ಹಸಿರಿನ ಪರಿಸರವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.

4. ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆಯಲ್ಲಿ ಇಲಾಖೆ ಶ್ರಮಿಸುತ್ತಿದ್ದು ಕಳೆದ 10 ವರ್ಷಗಳಲ್ಲಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತೀರ್ಣ 3.25 ಲಕ್ಷ ಹೆಕ್ಟೇರ್‌ಗಳಷ್ಟು ಹೆಚ್ಚಾಗಿದೆ. ರಾಜ್ಯದಲ್ಲಿ ಬೆಳೆಗಳ ವಿಸ್ತೀರ್ಣ ಪ್ರತಿವರ್ಷ ಸರಾಸರಿ ಶೇಕಡ 3 ರಷ್ಟು ಹೆಚ್ಚುತ್ತಿದ್ದು, ಹಸಿರಿನ ಪರಿಸರವೂ ಸಹ ತನ್ಮೂಲಕ ಹೆಚ್ಚುತ್ತಿದೆ.

5. ತೋಟಗಾರಿಕೆ ಇಲಾಖೆ ಲಾಲ್‌ಬಾಗ್, ಕಬ್ಬನ್ ಪಾರ್ಕ್, ಬೃಂದಾವನ ಹಾಗೂ ರಾಜ್ಯದ ಇತರ ಉದ್ಯಾನವನಗಳನ್ನು ಹಾಗೂ ನಂದಿ, ಕೃಷ್ಣರಾಜೇಂದ್ರ ಗಿರಿಧಾಮ, ಊಟಿ ಗಿರಿಧಾಮಗಳನ್ನು ನಿರ್ವಹಿಸುತ್ತಿದೆ. ಇವೆಲ್ಲವೂ ಸಾರ್ವಜನಿಕರಿಗೆ ವಿಹಾರ ಕೇಂದ್ರಗಳಾಗಿದ್ದು ಪರಿಸರ ನೈರ್ಮಲ್ಯಕ್ಕೆ ಕಾರಣವಾಗಿದೆ.

6. ತೋಟಗಾರಿಕೆ ಇಲಾಖೆಯು ಸಾವಯವ ಬೇಸಾಯ, ಜೈವಿಕ ನಿಯಂತ್ರಣ ಇತ್ಯಾದಿ ಪರಿಸರ ಸ್ನೇಹಿ ಚಟುವಟಿಕೆಗಳನ್ನು ಪ್ರಚಾರಗೊಳಿಸುತ್ತಿದೆ.

7. ಲಾಲ್‌ಬಾಗ್ ಹಾಗೂ ಕಬ್ಬನ್ ಉದ್ಯಾನವನಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಸಿದಲಾಗಿದೆ.

8. ತೋಟಗಾರಿಕೆ ಇಲಾಖೆವತಿಯಿಂದ ವನವಹೋತ್ಸವ, ವೃಕ್ಷ ಸಂವರ್ದನೆ, ಒಣಭೂಮಿ ಅಭಿವೃದ್ಧಿ ಇತ್ಯಾದಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಾಗುತ್ತಿದೆ.

ಇ) ಮಂಗಳೂರು ಕದ್ರಿ ಉದ್ಯಾನವನವನ್ನು ಅಭಿವೃದ್ಧಿಗೊಳಿಸಲು ಚೈನ್‌ಲಿಂಕ್ ಬೇಲಿ ನಿರ್ಮಿಸಲಾಗಿದೆ. ಅಲಂಕಾರಿಕ ಗಿಡಗಳನ್ನು ಹಬ್ಬಿಸಲು ಕಮಾನು ನಿರ್ಮಾಣಮಾಡಲಾಗಿದೆ. ಪಾಟಿಂಗ್ ಶೆಡ್ ನಿರ್ಮಾಣ ಮಾಡಲಾಗಿದೆ. ಶೆಬ್ಬರಿ ಮತ್ತು ಹೊಸ ಅಲಂಕಾರಿಕ ಗಿಡಗಳ ನಾಟಿ ಮಾಡಲಾಗಿದೆ.

ಅಲ್ಲದೆ ಇನ್ನೊಂದು ಕಮಾನು ನಿರ್ಮಾಣ ಮಧ್ಯಭಾಗದ ವೃತ್ತದ ಹೊರಭಾಗದ ರಸ್ತೆಯ ಎರಡು ಬದಿಗೆ ಕೆಂಪು ಕಲ್ಲಿನಿಂದ ಕಟ್ಟುವುದು, ರಸ್ತೆ ಮಧ್ಯಭಾಗಕ್ಕೆ ಮಣ್ಣು ತುಂಬಿ ಎತ್ತರವಾಗಿಸುವುದು ಮತ್ತು ಕದ್ರಿ ಉದ್ಯಾನವನದಲ್ಲಿ ಹುಲ್ಲು ಕತ್ತರಿಸಲು ಲಾನ್ ಮೂವರ್ ಖರೀದಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಧಾನ ಸೌಧದಲ್ಲಿರುವ ಕರ್ನಾಟಕ ರಾಜ್ಯ ಕೋ–ಆಪರೇಟಿವ್ ಅಪೆಕ್ಸ್ ಬ್ಯಾಂಕನಲ್ಲಿ ಎ.ಟಿ.ಎಂ. ತೆರೆಯುವುದು

635(5207) : ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಕರ್ನಾಟಕ ರಾಜ್ಯ ಕೋ–ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಶಾಖೆಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಎಲ್ಲೆಲ್ಲಿ ಎ.ಟಿ.ಎಂ. ಸೌಲಭ್ಯ ಕಲ್ಪಿಸಲಾಗಿದೆ.

ಇ) ಬೆಂಗಳೂರು ವಿಧಾನಸೌಧದ ಶಾಖೆಯಲ್ಲಿರುವ ಒಟ್ಟು ಎಲ್ಲಾ ವಿಧದ ಖಾತೆಗಳ ಸಂಖ್ಯೆ ಎಷ್ಟು;

ಈ) ವಿಧಾನ ಸೌಧದಲ್ಲಿ ಖಾತೆ ಹೊಂದಿರುವವರಿಗೆ ಅನುಕೂಲವಾಗಲು ಎ.ಟಿ.ಎಂ.ಸೌಲಭ್ಯ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

ಅ) ಬೆಂಗಳೂರು ನಗರದಲ್ಲಿ ಒಟ್ಟು 30 ಶಾಖೆಗಳಿರುತ್ತವೆ.

ಆ) ಯಾವ ಶಾಖೆಯಲ್ಲೂ ಎ.ಟಿ.ಎಂ.ಸೌಲಭ್ಯ ಕಲ್ಪಿಸಿರುವುದಿಲ್ಲ.

ಇ) ಒಟ್ಟು ಖಾತೆಗಳ ಸಂಖ್ಯೆ 10775.

ಈ) ವಿಧಾನ ಸೌಧದಲ್ಲಿ ವಿಸ್ತಾರವಾದ ಸ್ಥಳಾವಕಾಶವನ್ನು ಒದಗಿಸಿದಲ್ಲಿ ಗ್ರಾಹಕರಿಗೆ ಎ.ಟಿ.ಎಂ. ಸೌಲಭ್ಯ ಒದಗಿಸಲು ಅಪೆಕ್ಸ್ ಬ್ಯಾಂಕ್ ಸಿದ್ಧವಿದೆ.

ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆಯ ದುರಾಡಳಿತದ ಬಗ್ಗೆ ತನಿಖೆ

636 (5426) : ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇದರ ದುರಾಡಳಿತದ ಬಗ್ಗೆ ತನಿಖೆಗಾಗಿ ಸೂಕ್ತ ಅಧಿಕಾರಿಯನ್ನು ನೇಮಿಸಿ ತನಿಖೆ ಕಾರ್ಯ ಕೈಗೊಂಡು ಒಂದು ಪ್ರಸ್ತುವವನ್ನು ಸಲ್ಲಿಸುವಂತೆ ಸಹಕಾರ ನಿಬಂಧಕರಿಗೆ 23.09.02ರಲ್ಲಿ ನಿರ್ದೇಶಿಸಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸದರಿ ಅಧಿಕಾರಿಯವರು ತೆಗೆದುಕೊಂಡಿರುವ ಕ್ರಮಗಳೇನು;

ಇ) ತನಿಖೆ ಆಗಿದ್ದಲ್ಲಿ ಪ್ರಸ್ತಾವದ ವಿವರಗಳೇನು;